**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ: 09.02.2023**

**ಪಾಟೀ ಸವಾಲು - 2 ಮತ್ತು 5 ನೇ ಪ್ರತಿವಾದಿಯರ ಪರ ವಕೀಲರಿಂದಃ**

4. ಗಿರಿಯಪ್ಪ ನನ್ನ ತಾತನಿದ್ದು, ಅವರ ತಂದೆಯ ಹೆಸರು ಹೊನ್ನೂರಪ್ಪ. ಹೊನ್ನೂರಪ್ಪನಿಗೆ 8 ಜನ ಮಕ್ಕಳು ಎಂದರೆ ಸರಿ. ಅವರಲ್ಲಿ ಕೆಲವರ ಹೆಸರು ಮಾತ್ರ ಗೊತ್ತು. ಆ 8 ಜನ ಮಕ್ಕಳ ಹೆಸರುಗಳು ಗಿರಿಯಪ್ಪ, ದೊಡ್ಡಮುನಿಶಾಮಪ್ಪ, ಚಿಕ್ಕಮುನಿಶಾವುಪ್ಪ, ತಿಮ್ಮಕ್ಕ, ಚಿಕ್ಕಮುನಿಯಮ್ಮ ಮತ್ತು ನಂಜಮ್ಮ ಎಂದು 6 ಜನ ಮಕ್ಕಳ ಹೆಸರನ್ನು ಸೂಚಿಸಿದ್ದಾರೆ ಅದಕ್ಕೆ ಸಾಕ್ಷಿಯು ಸರಿ ಎಂದು ಒಪ್ಪಿದ್ದಾರೆ. ಇನ್ನಿಬ್ಬರೂ ಮಕ್ಕಳ ಹೆಸರುಗಳು ದೊಡ್ಡಅಕ್ಕಾಯಮ್ಮ ಮತ್ತು ವೆಂಕಟಲಕ್ಷ್ಮಮ್ಮ ಎಂದು ಈಗ ನೆನಪಾಗುತ್ತಿದೆ ಎಂದು ಹೇಳಿದ್ದಾರೆ. ನನ್ನ ತಾತ ಗಿರಿಯಪ್ಪನಿಗೆ 6 ಜನ ಮಕ್ಕಳೇ? ಎಂದರೆ ಹೌದು. ಅವರ ಹೆಸರುಗಳು ಗೋಪಾಲಪ್ಪ, ವೆಂಕಟೇಶಪ್ಪ, ನಂಜಪ್ಪ, ಗೋಪಮ್ಮ, ರತ್ನಮ್ಮ ಮತ್ತು ವೆಂಕಟಮ್ಮ ಎಂದರೆ ಸರಿ. ಗೋಪಾಲಪ್ಪ ಮೃತಪಟ್ಟು ತುಂಬಾ ದಿನಗಳಾಗಿದ್ದು ಅವರಿಗೆ ಎಷ್ಟು ಜನ ಮಕ್ಕಳೆಂದು ನನಗೆ ಗೊತ್ತಿಲ್ಲ. ಗೋಪಾಲಪ್ಪನ ಹೆಂಡತಿ ವೆಂಕಟಮ್ಮ ಮತ್ತು ಮಗ ಗಂಗಾಧರ ಎಂದರೆ ಸರಿ. ಗಂಗಾಧರ ಚಿಕ್ಕಬಳ್ಳಾಪುರ ತಾಲ್ಲೂಕಿನ ನಲ್ಲಪ್ಪನಹಳ್ಳಿಯಲ್ಲಿ ವಾಸ ಮಾಡುತ್ತಾರೆ ಎಂದರೆ ಇರಬಹುದು. ಗೋಪಮ್ಮನಿಗೆ ಭಾಗ್ಯಮ್ಮ ಮತ್ತು ವೆಂಕಟೇಶ ಎಂಬ ಇಬ್ಬರು ಮಕ್ಕಳಿದ್ದಾರೆ ಎಂದರೆ ಸರಿ. ಚಿಕ್ಕಮುನಿಯಮ್ಮನಿಗೆ ಮುನಿಯಪ್ಪ ಮತ್ತು ಗೋಪಾಲಪ್ಪ ಎಂಬ ಇಬ್ಬರು ಮಕ್ಕಳಿದ್ದಾರೆ ಎಂದರೆ ಇರಬಹುದು. ಈ ದಾವೆಯಲ್ಲಿ ನಾನು ಗೋಪಮ್ಮನ ಮತ್ತು ಚಿಕ್ಕಮುನಿಯಮ್ಮನ ಮಕ್ಕಳನ್ನು ಮತ್ತು ಗೋಪಾಲಪ್ಪನ ವಂಶಸ್ಥರನ್ನು ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಾನು ಉದ್ದೇಶಪೂರ್ವಕವಾಗಿ ಈ ಎಲ್ಲಾ ವ್ಯಕ್ತಿಗಳನ್ನು ಪಕ್ಷಕಾರರಾಗಿ ಮಾಡಿಲ್ಲವೆಂದರೆ ಸರಿಯಲ್ಲ.

5. 6 ನೇ ಪ್ರತಿವಾದಿ ನಂಜಮ್ಮ ಸುಮಾರು 5-6 ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿ ವೆಂಕಟಮ್ಮ ತೀರಿಕೊಂಡಿದ್ದಾರೆ ಎಂದರೆ ಹೌದು, ಇತ್ತೀಚಿಗೆ ಮೃತಪಟ್ಟಿದ್ದಾರೆ. ಆಕೆಯ ಗಂಡ ಮತ್ತು 6 ಜನ ಮಕ್ಕಳು ಜೀವಂತವಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 6 ಮತ್ತು 8 ನೇ ಪ್ರತಿವಾದಿಯರು ಮೃತಪಟ್ಟ ಬಗ್ಗೆ ಮತ್ತು ಅವರಿಗೆ ವಾರಸುದಾರರು ಇರುವ ಬಗ್ಗೆ ನನಗೆ ಗೊತ್ತಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಯ ಮಕ್ಕಳು ಬಚ್ಚಹಳ್ಳಿಯಲ್ಲಿ ವಾಸ ಮಾಡುತ್ತಿರುವುದು ಗೊತ್ತಿದ್ದರೂ ಕೂಡ ಅವರನ್ನು ದಾವೆಗೆ ಸೇರಿಸಿಲ್ಲ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿ ಕೂಡ ಮೃತಪಟ್ಟಿದ್ದಾರೆ ಎಂದರೆ ಸರಿ. 10 ನೇ ಪ್ರತಿವಾದಿಗೆ 3 ಜನ ಮಕ್ಕಳಿದ್ದಾರೆ ಎಂದರೆ ಸರಿ. ಅವರನ್ನು ಕೂಡ ಈ ದಾವೆಯಲ್ಲಿ ಉದ್ದೇಶಪೂರಿತವಾಗಿ ಸೇರಿಸಿಲ್ಲ ಎಂದರೆ ಸುಳ್ಳು.

**(**ಈ ಹಂತದಲ್ಲಿ ವಾದಿಯ ಪರ ವಕೀಲರು ಮೃತ **6, 8** ಮತ್ತು **10** ನೇ ಪ್ರತಿವಾದಿಗಳ ವಾರಸುದಾರರನ್ನು ಕಡತದ ಮೇಲೆ ತರಲು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಿತು**).**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**